ಎಂ.ವಿ.ಸಿ - 810/2023
ಪಿ.ಡಬ್ಲ್ಯು - 01

**ದಿನಾಂಕ : 28-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 1 ನೇ ಎದುರುದಾರರ ಪರ ಎಸ್ ಎನ್ ವಕೀಲರಿಂದಃ**

ಅಪಘಾತ ಉಡುಪಿ- ಬ್ರಹ್ಮಾವರ ರಸ್ತೆಯಲ್ಲಿ ಆಗಿರುತ್ತದೆ . ಅಪಘಾತ ಜಂಕ್ಷನ್ ಬಳಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಜಂಕ್ಷನ್ ನಿಂದ 300 ಅಡಿ ಮುಂದಕ್ಕೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಅಪಘಾತ ದುರ್ಗಾಪರಮೇಶ್ವರಿ ದೇವಸ್ಥಾನ ಬಳಿ ಆಗಿರುತ್ತದೆ. ದೇವಸ್ಥಾನ ಸ್ವಲ್ಪ ಎತ್ತರದಲ್ಲಿ ಇರುತ್ತದೆ ಎಂದರೆ ಸರಿ . ದೇವಸ್ಥಾನಕ್ಕೆ ಹೋಗುವ ರಸ್ತೆ ಕೂಡ ಏರು ಬದಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾನು ದೇವಸ್ಥಾನದ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗೆ ಬರುತಿದ್ದೆ ಎಂದರೆ ಸರಿಯಲ್ಲ. ನಾನು ದೇವಸ್ಥಾನದ ಕಡೆಯಿಂದ ಇಳಿಜಾರಿನ ರಸ್ತೆಯಲ್ಲಿ ಬರುತಿದ್ದೆ ಎಂದರೆ ಸರಿಯಲ್ಲ. ಅಪಘಾತ ಕಾರಿನ ಹಿಂಬದಿಯ ಎಡಭಾಗದ ಬಂಪರ್ ತಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ -7 ಐಎಂವಿ ವರದಿಯನ್ನು ಒಪ್ಪುತ್ತೇನೆ . ನಿಪಿ 7 ರ ಪ್ರಕಾರ ನಾನು ಹಿಂಬದಿ ಬಂಪರ್ ಗೆ ಹೋಗಿ ಡಿಕ್ಕಿಪಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ನೇರವಾಗಿ ಹೋಗುತ್ತಿರುವಾಗ ಕಾರಿನ ಎದುರುಗಡೆ ಎಡದ ಬಾಡಿ ನನ್ನ ರಿಕ್ಷಾದ ಬಲಬದಿಯ ಹಿಂಬದಿಗೆ ಡಿಕ್ಕಿಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ . ನನ್ನ ರಿಕ್ಷಾದ ಯಾವ ಭಾಗಕ್ಕೆ ಜಖಂ ಆಗಿದೆ ಎಂದು ನಾನು ಪೊಲೀಸರಿಗೆ ಮಾಹಿತಿ ಕೊಟ್ಟಿರುತ್ತೇನೆ . ನಾನು ದೇವಸ್ಥಾನದ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗೆ ವೇಗವಾಗಿ ಬಂದು ನನ್ನ ಕಂಟ್ರೋಲ್ ತಪ್ಪಿ ಕಾರಿಗೆ

ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿ ಪ್ರಭಾಕರ ಎಂದರೆ ಸರಿ . ಅವರು ಕೂಡ ರಿಕ್ಷಾ ಚಾಲಕ ಎಂದರೆ ಸರಿ. ಅದೇ ರೀತಿ ಮಹಜರು ಸಾಕ್ಷಿದಾರರುಗಳಾದ ರಾಕೇಶ್ ಮತ್ತು ಕರುಣಾಕರ ನಮ್ಮ ಕಡೆಯವರು ಎಂದರೆ ಸರಿ ಮತ್ತು ಅವರುಗಳು ಆಟೋ ರಿಕ್ಷಾ ಚಾಲಕರು ಎಂದರೆ ಸರಿ . ನಾನು ಕೂಡ ಆಟೋ ರಿಕ್ಷಾ ಚಾಲಕ ಎಂದರೆ ಸರಿ . ನಾನು ಹೇಳುವಂತೆ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳಿಗೆ ಪೂರಕವಾಗಿ ಯಾವುದೇ ಔಷಧಿ ಸಲಹಾ ಚೀಟಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ನಾನು ಬೆಳಿಗ್ಗೆ 2 ಗಂಟೆ ಮತ್ತು ಸಂಜೆ 2 ಗಂಟೆ ಮಾತ್ರ ಆಟೋ ಚಲಾಯಿಸುತ್ತೇನೆ . ಕಾಲು ಕೆಳಗೆ ಇಟ್ಟರೇ ದಪ್ಪ ಆಗುತ್ತದೆ ಮತ್ತು ಜುಂ ಎಂದು ಸ್ಪರ್ಶ ಇರುವುದಿಲ್ಲ. ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದೆ ಎನ್ನುವ ಬಗ್ಗೆ ವೈದ್ಯರು ಸಲಹೆ ಕೊಟ್ಟ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸಿರುತ್ತೇನೆ . ಬಿಲ್ಲಿನಲ್ಲಿ ತೋರಿಸಿರುವಷ್ಟು ಹಣ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಕೂಡ ಆಟೋ ಚಲಾಯಿಸುತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರ ಪಡೆಯಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.

ಎಂ.ವಿ.ಸಿ - 810/2023
ಪಿ.ಡಬ್ಲ್ಯು - 01